ಕಂದಾಯ ಇಲಾಖೆ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ.ಪಹಣಿ/ವಿವಾದ/07/2015-16 ದಿನಾಂಕ:

ವಾದಿಗಳು

1. ಶ್ರೀ ಹುಲಿಕಟ್ಟೆ ಮುದುಕಪ್ಪ ತಂದೆ ಕೊಟ್ರೇಶಪ್ಪ
2. ಶ್ರೀಮತಿ ಉಗ್ಗಮಲ್ಲಪ್ಪನವರ ಬಸವ್ವ ಗಂಡ ಬಸವರಾಜಪ್ಪ
3. ಶ್ರೀಮತಿ ಗುಬ್ಬನವರ ಜಯವ್ವ ಗಂಡ ಹನುಮಂತಪ್ಪ
4. ಶ್ರೀಮತಿ ಮಂಡರಗಟ್ಟಿ ನಿರ್ಮಲವ್ವ ಗಂಡ ಸಿದ್ದಪ್ಪ
5. ಶ್ರೀಮತಿ ಲಲಿತವ್ವ ಗಂಡ ನಿಂಗಪ್ಪ

ಪ್ರತಿವಾದಿಗಳು

1.ಶ್ರೀ ಹೆಚ್ ನಾಗರಾಜ ತಂದೆ ಮುದಕಪ್ಪ

2. ಶ್ರೀ ನಿಂಗಪ್ಪ ತಂದೆ ಮುದುಕಪ್ಪ ಮಿರಾಕೊರ್ನಹಳ್ಳಿ

ವಾದಗ್ರಸ್ತ ಜಮೀನಿನ ವಿವರ

| ಕ್ರಮ ಸಂಖ್ಯೆ | ಸರ್ವೇ ನಂಬರ | ವಿಸ್ತೀರ್ಣ | ಗ್ರಾಮದ ಹೆಸರು |
|---|---|---|---|
| 1 | 197 | 4.00 | ದೇವಗೊಂಡನಹಳ್ಳಿ |

ಪೀಠಿಕೆ,

ಹಡಗಲಿ ತಾಲೂಕಿನ ದೇವಗೊಂಡನಹಳ್ಳಿ ಗ್ರಾಮದ ಸರ್ವೆ ನಂ 197 ಪೈಕಿ, ವಿಸ್ತೀರ್ಣ 4.00 ಎಕರೆ ಜಮೀನನ್ನು ಒಂದನೇ ವಾದಿಗಳು ತಮ್ಮ ತಂದೆಯಾದ ಶ್ರೀ ಹುಲಿಕಟ್ಟೆ ಮುದುಕಪ್ಪ ಇವರು ನೊಂದಾಯಿತ ದಸ್ತಾವೇಜು ಸಂಖ್ಯೆ 51/2013-14 ದಿನಾಂಕ 12.11.2013ರ ವಿಲ್ಲು ನಾಮ ದಸ್ತಾವೇಜು ಪ್ರಕಾರ ತಮ್ಮ ಹೆಸರುಗಳಿಗೆ ತಲಾ ಒಂದು ಎಕರೆ ಜಮೀನನ್ನು ಬರೆದು ಕೊಟ್ಟಿರುತ್ತಾರೆಂದು ತಿಳಿಸಿ, ದಾಖಲೆಗಳೊಂದಿಗೆ ತಮ್ಮ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು ಕೋರಿರುತ್ತಾರೆ ಸದರಿಯವರ ಅರ್ಜಿಮೇರೆಗೆ ಹಕ್ಕು ಬದಲಾವಣೆ ಸಂಖ್ಯೆ ಹೆಚ್ 78/2014-15 ರಲ್ಲಿ ನೊಂದಾಯಿಸಿಕೊಂಡು ಹಿತಾಸಕ್ತರಿಗೆ ನಮೂನೆ 21 ರಲ್ಲಿ ನೋಟೀಸ್ ಜಾರಿ ಮಾಡಿ ಪ್ರಚುರ ಪಡಿಸಿರುತ್ತಾರೆ ನಿಗಧಿತ ಅವದಿಯಲ್ಲಿ ಪ್ರತಿವಾದಿಗಳು ತಕರಾರು ಸಲ್ಲಿಸಿದ ಮೇರೆಗೆ ಪ್ರಕರಣವನ್ನು ಕಂದಾಯ ನೀರೀಕ್ಷಕರು ಹಡಗಲಿ ಇವರು ವಿವಾದಾಸ್ಪದ ವೆಂದು ಪರಿಗಣಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಪ್ರಕಣವನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 129ರಡಿಯಲ್ಲಿ ವಿಚಾರಣೆಗೆ ತೆಗೆದುಕೊಂಡು ದಿನಾಂಕ:03.09.2015 ರಂದು ವಿಚಾರಣೆಯನ್ನು ಪ್ರಾರಂಭಿಸಿ ದಿನಾಂಕ:15.10.2015 ರಂದು ಮುಕ್ತಾಯ ಗೊಳಿಸಲಾಯಿತು. ವಿಚಾರಣೆಗೆ ವಾದಿ ಮತ್ತು ಪ್ರತಿವಾಧಿ ಹಾಜರಾಗಿರುತ್ತಾರೆ.

ಪ್ರತಿವಾದಿಗಳು ತಕರಾರು ಸಲ್ಲಿಸಿದ ಮೇರೆಗೆ ಮತ್ತು ಮಾನ್ಯ ಉಚ್ಚನ್ಯಾಯಾಲಯದ ಆದೇಶದಂತೆ ಯಾವುದೇ ವಿಲ್ಲನಾಮ ಸೂಕ್ತ ಸಿವಿಲ್ ನ್ಯಾಯಾಲಯದಲ್ಲಿ ಪರಿಕ್ಷಾರ್ಥಕ್ಕೆ ಒಳಪಡಬೇಕಾಗಿದ್ದ (ಪ್ರೋಬೇಟ್) ಕಾರಣ ಈ ಪ್ರಕರಣವು ಈ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವುದಿಲ್ಲ ಕಾರಣ ಈ ಕೆಳಕಂಡ

:-ಆದೇಶ-:

ಪ್ರಕರಣದ ವಾಸ್ತವಾಂಶ, ಹಿನ್ನೆಲೆಹಾಗೂ ದಾಖಲೆಗಳ ಮೇರೆಗೆ ದೇವಗೊಂಡನಹಳ್ಳಿ ಗ್ರಾಮದ ಸರ್ವೆ ನಂ 197 ಪೈಕಿ, ವಿಸ್ತೀರ್ಣ 4.00 ಎಕರೆ ಜಮೀನಿಗೆ ಸಂಬಂದಿಸಿದಂತೆ ವಾದಿ ಮತ್ತು ಪ್ರತಿವಾದಿಗಳು ಸೂಕ್ತ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ನಿರ್ದೇಶಿಸಿ ಪ್ರಕರಣವನ್ನು ವಿಲೇ ಗೊಳಿಸಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 07.2016 ರಂದು ತೆರದ ನ್ಯಾಯಲಯದ್ಲಿ ಗೋಶಿಸಲಾಗಿದೆ

ತಹಶೀಲ್ದಾರರು
ಹಡಗಲಿ

ಪ್ರತಿಯನ್ನು:

1ಶ್ರೀ.ದೇವರಮನಿ ಉಮಾಪತಿ ತಂದೆ ಹಾಲಪ್ಪ ಹಿರೇಹಡಗಲಿ ಗ್ರಾಮ

2.ಶ್ರೀ ಬಾಣದ ರಾಮಪ್ಪ ತಂದೆ ಕೊಟ್ರಪ ಹಿರೇಹಡಗಲಿ ಗ್ರಾಮ

3.ಶ್ರೀಮತಿ ವಿಶಾಲವ್ವ ಗಂಡ ದೇವರಮನಿ ಉಮಾಪತಿ ಬೀರಬ್ಬಿ

4.ಗಣಿಕೀಕರಣ ಕೇಂದ್ರ ತಹಶೀಲ್ದಾರರ ಕಛೇರಿ ಹಡಗಲಿ